ತನ್ನನ್ನೇ ಬೈದುಕೊಂಡ... ಮತ್ತೆ ಸಂಪರ್ಕಕ್ಕೆ ಬರಲಾಗದ ಯಾವುದೋ ಕಾರಣಗಳಿರಬಹುದಲ್ಲವೆ? ಯಾವುದೋ ಅನಿವಾರ್ಯ ಸಮಯದಲ್ಲಿ ಜೀವವೊಂದು ನಿನ್ನಿಂದಾಗಿ ಭಾವನಾತ್ಮಕ ಆಸರೆ ಪಡೆದುಕೊಂಡು ಹೊಸತನ ಪಡೆದುಕೊಂಡರೆ ಅದಕ್ಕೆ ನೀನು ಹೆಮ್ಮೆ ಪಡೆದುಕೊಳ್ಳಬೇಕಲ್ಲವೇ! ನಿನ್ನ ಭಾವಸಾನಿಧ್ಯ ಅವಳ ದುರ್ಬಲ ಗಳಿಗೆಯನ್ನು ದಾಟಿಸಲು ಸಾಧ್ಯವಾದರೆ ಅದು ನಿನ್ನ ಬದುಕಿನ ಸಾರ್ಥಕ ಕ್ಷಣವೂ ಅಲ್ಲವೇನೋ ಬೋ... ಮಗನೆ! ಅಷ್ಟಕ್ಕೂ ಭಾವನೆಗಳ ಪಲ್ಲಟವು ಮನುಷ್ಯನ ಸ್ವಭಾವಗುಣವಲ್ಲವೆ? ಈ ಕ್ಷಣದ ಉತ್ಕಟ ಭಾವ ಎಷ್ಟು ನಿಜವೋ ಮರುಕ್ಷಣ ತೀವ್ರತೆಯನ್ನು ಕಳೆದುಕೊಳ್ಳುವ ಸಾಧ್ಯತೆಯೂ ಸುಳ್ಳಲ್ಲವಲ್ಲ. ಅನುರಕ್ತಿ ಮತ್ತು ವಿರಕ್ತಿ ಒಂದೇ ಬಿಂದುವಿನಲ್ಲಿ ಹಾಯುವ ಭಾವತರಂಗಗಳಲ್ಲವೇ? ಅವಳು ನಿನ್ನನ್ನು ನಿರ್ಲಕ್ಷಿಸಿ ತೆರಳಿದ ಕೊರಗಿನಲ್ಲಿ ನವೆಯುವುದಕ್ಕಿಂತ ಅವಳೊಡನೆಯ ಮೋಹಕ ಕ್ಷಣಗಳನ್ನು ನೆನೆದು ಹಗುರಗೊಳ್ಳಬೇಕಲ್ಲವೆ ನೀನು! ಎಲ್ಲವನ್ನೂ ಕಾರ್ಯಕಾರಣದಲ್ಲಿ ಹಿಂಜಿ ನೋಡುವುದು ಅಗತ್ಯವೆ?... ಪರಸ್ಪರ ವಿರುದ್ಧದ ಯೋಚನೆಗಳು ಶಾಂತನನ್ನು ನಿತ್ರಾಣಗೊಳಿಸುತ್ತಿದ್ದವು. ಅವನೇ ಹಚ್ಚಿಕೊಳ್ಳುತ್ತಿದ್ದ ಭಾವನಾತ್ಮಕ, ವೈಚಾರಿಕ, ತಾತ್ವಿಕ ಮುಲಾಮು ಅವನ ಹೃದಯದ ಗಾಯವನ್ನು ಮಾಯಿಸುವಲ್ಲಿ ಮಾತ್ರ ಯಶಸ್ವಿಯಾಗಲಿಲ್ಲ.

★★★

ಪ್ರೀತಿಯ ಕುಸುಮ, ನಿಮ್ಮೊಂದಿಗೆ ಒಂದಿಷ್ಟು ಮಾತಾಡಲೇ ಬೇಕಾಗಿದೆ. ನನ್ನೊಡಲು ಸ್ಫೋಟಗೊಳ್ಳುವ ಮೊದಲೇ ಅದನ್ನು ಕಾರಿಕೊಂಡು ಹಗುರಾಗಬೇಕಿದೆ. ಈ ನಿಮ್ಮ ಮೌನಕ್ಕೆ ಕಾರಣವೇನು? ಹೇಗಿದ್ದೀರಿ ಎಂದು ಕೇಳುವ ಸೌಜನ್ಯವೂ ನಿಮಗಿಲ್ಲ. ಹೋಗಲಿ ನಾ ಕಳಿಸಿದ ಎಸ್ಸೆಮ್ಮೆಸ್ಸು ವಾಟ್ಸ್ಆ್ಯಪ್‌ಗಳಿಗೆ ಮತ್ತು ಕಾಲ್‌ಗಳಿಗೂ ನಿಮ್ಮ ಉತ್ತರವಿಲ್ಲ. ನಿಮಗೆ ಅಂಟಿಕೊಳ್ಳಬೇಡಿ ಅಂದಿದ್ದೆ, ನಿಜ! ನೀವದನ್ನು ಅಕ್ಷರಶಃ ಪಾಲಿಸಿದಿರಿ! ಅಂಟಿಕೊಳ್ಳದಿರುವುದು ಅಂದರೆ ಮರೆತು ಬಿಡುವುದಾಗಿರಲಿಲ್ಲ. ನಿರ್ಲಕ್ಷಿಸುವುದಾಗಿರಲಿಲ್ಲ. ಭಾವಶೂನ್ಯರಾಗುವುದಾಗಿರಲಿಲ್ಲ. ನಿಮ್ಮ ಮೌನ ಮತ್ತು ತಿರಸ್ಕಾರದಿಂದ ನನ್ನ ಸ್ವಾಭಿಮಾನವು ದಹಿಸಿದರೂ ಸಹಿಸಿಕೊಂಡೆ. ಕಾರಣ ನನಗೆ ನಿಮ್ಮನ್ನು ಮೊದಲ ಬಾರಿಗೆ ಭೇಟಿ ಮಾಡಿದ ಆ ಕ್ಷಣ! ನಿಮ್ಮೆರಡೂ ಕೈಗಳನ್ನು ಹಿಡಿದಾಗ ದೇಹದಲ್ಲಿ ಮಿಂಚಿಹೋದ ಅವ್ಯಕ್ತ ಭಾವದ ಆ ಗಳಿಗೆ ಅದೆಷ್ಟೋ ವರ್ಷಗಳವರೆಗೆ ಯಾವುದೇ ಸ್ನೇಹವಿಲ್ಲದೇ ಒಣಗಿಹೋಗಿದ್ದ ಜೀವಕ್ಕೆ ಇಬ್ಬನಿಯಾದದ್ದು ನಿಜ. ನಿಮಗೆ ಅದು ಒಂದು ಸರಳ ಸಾಮಾನ್ಯ ಭೇಟಿಯಾಗಿರಬಹುದು. ನಾನದನ್ನು ಅಸಾಮಾನ್ಯ ಅಲೌಕಿಕ ಎಂದು ಪರವಶನಾದೆ. ಅಂಟಿಕೊಳ್ಳದಿರಿ ಎಂದು ಹೇಳುತ್ತಲೇ ಅಂಟಿಕೊಂಡುಬಿಟ್ಟೆ. ಅಂಟಿಕೊಳ್ಳುವುದು ನೋವು ತರುತ್ತದೆ ಎಂಬುದು ನನ್ನ ಅನುಭವವಾಗಿತ್ತು. ಅಂಟದಿರುವುದೂ ನೋವಾದದ್ದು ಮಾತ್ರ ವಿಚಿತ್ರ.

"ಪ್ರೀತಿಯಿಲ್ಲದೇ ಏನನ್ನೂ ಮಾಡಲಾರೆ. ನನಗದು ಜೀವನ್ಮರಣದ ಪ್ರಶ್ನೆ. ನಿಮಗೆ ಇಷ್ಟವಾಗದ ಯಾವುದೂ ನನಗೆ ಬೇಡ. ಎರಡೂ ಕೈಹಿಡಿದು ನಿಮ್ಮನ್ನು ನನ್ನ ಮನಸಿನೊಳಗೆ ಇಳಿಸಿಕೊಂಡಷ್ಟೇ ಪ್ರೀತಿಯಿಂದ ನಿಮ್ಮನ್ನು ಬೀಳ್ಕೊಡುವೆ" ಎಂದಿದ್ದೆ. ನೆನಪಿದೆಯಾ? ಬಿಡಿ, ಜನುಮಕ್ಕೆ ಸಾಲುವಷ್ಟು ಪ್ರೀತಿ ಅಕ್ಷರಾಭಿಷೇಕವನ್ನೇ ಮರೆತವಳು ಈ ಮಾತು ನೆನಪಿಡುತ್ತಿಯೆಂಬುದು ನನ್ನ ಭ್ರಮೆ ಅಲ್ಲವೆ? ಅಥವಾ ಪ್ರೀತಿಯೇ ಮುಗಿದ ಮೇಲೆ ಈ ಒಣ ಬೀಳ್ಕೊಡುವ ಸಮಾರಂಭವಾದರೂ ಯಾಕೆ? ಎನ್ನುವುದು ನಿನ್ನ ಮೌನದ ಅರ್ಥವೆ? ಅಥವಾ ಪ್ರೀತಿಯ ಉತ್ಕಟತೆಯಲ್ಲೇ ಪ್ರೀತಿಗೆ ವಿಮುಖವಾದ ಮಾತುಗಳು ನಿಮಗೆ ಅಪಸ್ವರವಾಗಿ